ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ಅಧ್ಯಕ್ಷರೆ, ಇಲ್ಲಿ ಇಂತಹ ಗಹನವಾಹ ಚರ್ಚೆ ನಡೆಯುತ್ತಾ ಇದೆ, ದೇವೇಗೌಡರು ಪ್ರಾಯಶಃ ಎರಡೂವರೆ ಗಂಟೆ ಕಾಲ ಭಾಷಣ ಮಾಡಿದ್ದಾರೆ. ಮಾನ್ಯ ತಿಮ್ಮಪ್ಪನವರೂ ಮತ್ತಿತರ ಮಿತ್ರರೂ ಅನೇಕ ಉಪಯುಕ್ತವಾದ ಅಂಶಗಳನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವವರಿದ್ದಾರೆ. ಈ ದಿವಸ ಚರ್ಚೆಗೆ ಈ ವಿಷಯವನ್ನು ತೆಗೆದು ಕೊಳ್ಳಬೇಕೆಂದು ಹಿಂದೆ ನಿಗದಿ ಮಾಡಿದ್ದರೂ ಸಹ ಇದಕ್ಕೆ ಸಂಬಂಧಪಟ್ಟ ಮುಖ್ಯ ಮುಂತ್ರಿಗಳು ಹಾಜರಿಲ್ಲ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯನ್ನು ಬಹಳ ಪಾತ್ಚರವಾಗಿ ನೋಡುತ್ತಿದ್ದಾರೆ ನಾವಾದರೂ ತಮ್ಮ ಆದೇಶಕ್ಕೆ ತಲೆಬಾಗಿ, ಸದ್ದಿಲ್ಲದೆ ಕೂತ ಕೊಳ್ಳುತ್ತೇವೆ. ಶ್ರೀ ದೇವೇಗೌಡರು ಕೆಲವು ವಿಷಯಗಳನ್ನು ಒತ್ತಿ ಒತ್ತಿ ತಿಳಿಸಿದರು. ಯಾರಿಗೆ ತಿಳಿಸಿದರೋ ಅರ್ಥವಾಗುವುದಿಲ್ಲ. ಮಾನ್ಯ ಅಧ್ಯಕ್ಷರೆ ಈ ಪ್ರಶ್ನೆ ಬಹಳ ತ್ರಾಮುಖ್ಯವಾದುದು ಇದು ಕರ್ನಾಟಕ ಉಸಿರು, ಆದಂದರಿಂದ ಮಾನ್ಯ ಮುಖಿ ಮಂತ್ರಿಗಳ ಹಾಜರಿ ಅವಶ್ಯಕ.

SRI D. B. KALMANKAR.—Sri M. M. Channabasappa, hon Minister, for P. W. D. is sitting here and answering all the questions.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮುಖ್ಯ ಮಂತ್ರಿಗಳ ಪಾಯಿಂದ ಬರತಕ್ಕ ಜವಾಬು ಕರ್ನಾಟಕಕ್ಕೆ ಬಹಳ ತ್ರಾಮುಖ್ಯವಾದುದು. ಮುಖ್ಯ ಮಂತ್ರಿಗಳ ಈ ಉದ್ಧಟತನದ ವರ್ತನೆಯ ವಿರುದ್ಧ ನಾನು ಸಭಾತ್ಯಾಗ ಮಾಡುತ್ತೇನೆ.

(Sri B. Puttaswamaiah withdrew. Hon Chief Minister entered the House)

ಶ್ರೀ ಡಿ. ದೇವರಾಜ ಅರಸ್ —ನಾನು ಹೊರಗಡೆ ಹೋಗಿರಲಿಲ್ಲ. ಮೇಲ್ಮನೆಯಲ್ಲಿ ಸ್ವಲ್ಪ ಕೆಲಸ ಇದ್ದುದರಿಂದ ಅಲ್ಲಿ ಇರಬೇಕಾಗಿ ಬಂತು. ಅಷ್ಟೂ ಸೌಜನ್ಯತೆಯಿಂದ ಇರದಿದ್ದರೆ ಹೇಗೆ ? ಇವನು ಶ್ರೀ ದೇವೇಗೌಡರು ಕೂಡ ಒಪ್ಪುವುದಿಲ್ಲ, ಎಂದು ಕಾಣುತ್ತದೆ. ಮಾನ್ಯ ಪುಟ್ಟಸ್ವಾಮಿಯವರು ದೇವೇಗೌಡರನ್ನು ಕೇಳುವುದಿಲ್ಲ, ಯಾರನ್ನೂ ಕೇಳುವುದಿಲ್ಲ

ಶ್ರೀ ಹೆಚ್. ಡಿ. ದೇವೇಗೌಡ.—ಅವರು ನ್ಯಾಯಬದ್ಧವಾಗಿ ಹೋರಾಟ ಮಾಡುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ಇದು ನ್ಯಾಯಬದ್ಧವೆ ?

† ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಈಗ ಸಭೆಯ ಮುಂದಿರತಕ್ಕ ಪ್ರಶ್ನೆ ಬಹಳ ತ್ರಾಮುಖ್ಯವಾದುದು ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಬಚಾವತ್ ಟ್ರಿಬ್ಯೂನಲ್‌ನವರು ಬಹಳ ಮುಖ್ಯವಾದ ಒಂದು ತೀರ್ಪನ್ನು ಕೊಟ್ಟಿದ್ದಾರೆ. ಇಂಟರ್ ವಾಟರ್ ಡಿಸ್‌ಪ್ಯೂಟ್ ಆಕ್ಟ್ ೧೯೫೬ರ ಪ್ರಕಾರ ಟ್ರಿಬ್ಯೂನಲ್ ತೀರ್ಪು ಆಬ್ಸೈರ್ ಆಗುತ್ತದೆ. ಆದುದರಿಂದ ನಾವು ಯಾವುದೇ ನ್ಯಾಯ ದೊರಕಿಸಿಕೊಳ್ಳಬೇಕಾದರೂ ಈ ಆಕ್ಟ್ ಪಾರ್ಲಿಮೆಂಟ್‌ನಲ್ಲಿ ಅಮೆಂಡ್ ಆಗದ ಹೊರತು ಗತ್ಯಂತರ ಇಲ್ಲವೆಂದು ಮಾನ್ಯ ದೇವೇಗೌಡರು ಹೇಳಿದರು. ಅದು ಅಕ್ಷರಶಃ ನಿಜ. ಏತಕ್ಕೆಂದರೆ ಈ ಆಕ್ಟ್‌ನ ಪ್ರಕಾರ ಕಮಿಷನ್ ಏನು ತೀರ್ಪನ್ನು ಕೊಟ್ಟಿದ್ದಾರೆ ಅದು ಫೈನಲ್. ಆಕ್ಟ್ ಬದಲಾವಣೆ ಆಗದ ಹೊರತು ಸುಪ್ರೀಂ ಕೋರ್ಟ್ ಏನೂ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ೧೯೫೬ರ ಇಂಟರ್ ಸ್ಟೇಟ್‌ವಾಟರ್ ಡಿಸ್‌ಪ್ಯುಟ್ ಆಕ್ಟ್ ಏನಿದೆ ಅದನ್ನು ಪಾರ್ಲಿಮೆಂಟಿನಲ್ಲಿ ಅಮೆಂಡ್ ಮಾಡುವುದಕ್ಕೆ ಎಲ್ಲರೂ ಒಗ್ಗಟ್ಟಾಗಿ ಒತ್ತಾಯವನ್ನು ತೆಂದು ಸರ್ಕಾರದ ಮೇಲೆ ತರಬೇಕು ಎಂದು ನನ್ನ ಅಭಿಪ್ರಾಯವನ್ನು ಈ ಸಭೆಯ ಮುಂದೆ ತಿಳಿಸಂತ್ತಿದ್ದೇನೆ. ಈ ತೀರ್ಪಿನ ಪ್ರಕಾರ ಕರ್ನಾಟಕಕ್ಕೆ ಕೃಷ್ಣಾನದೀ ನೀರಿನಲ್ಲಿ ೭೫೫ ಟಿ ಎಂ. ಸಿ. ಎಫ್‌ಟಿ. ನೀರು ಕೊಟ್ಟಿದ್ದಾರೆ, ಮಹಾರಾಷ್ಟ್ರಕ್ಕೆ ೫೬೫ ಟಿ.ಎಂ.ಸಿ.ಎಫ್‌ಟಿ. ನೀರನ್ನು ಕೊಟ್ಟಿದ್ದಾರೆ ಮತ್ತು ಆಂಧ್ರಕ್ಕೆ ೮೦೦ ಟಿ.ಎಂ.ಸಿ.ಎಫ್.ಟಿ. ನೀರನ್ನು ಕೊಟ್ಟಿದ್ದಾರೆ ಡಿಪೆಂಡೆಬಲ್ ವಾಟರ್ ೨೮೬೦ ಟಿ ಎಂ ಸಿ. ಎಫ್. ಟಿ. ಯಷ್ಟು ಇದೆ ಎಂದೂ ಲೆಕ್ಕಕ್ಕೆ ತೆಗೆದುಕೊಂಡು ಕರ್ನಾಟಕಕ್ಕೆ ೬೦೧, ಮಹಾರಾಷ್ಟ್ರಕ್ಕೆ ೪೭೦, ಆಂಧ್ರಕ್ಕೆ ೮೦೦ ಟಿ.ಎಂ.ಸಿ.ಎಫ್. ಟಿ. ನೀರನ್ನು ಕೊಟ್ಟಿದ್ದಾರೆ. ಮಹಾರಾಷ್ಟ್ರದವರು ಕೇಳಿದ್ದು ೫೭೦ ಆವರಿಗೆ ಕೊಟ್ಟಿದ್ದು ೫೬೫. ೧೯೭೩ರಲ್ಲಿ ೪೭೦ ಟಿ.ಎಂ.ಸಿ.ಎಫ್.ಟ. ಏನು ಕೊಟ್ಟಿದ್ದಾರೆ ಅವರಕ್ಕಿಂತ ೧೬೫ ಟಿ ಎಂ.ಸಿ ಎಫ್ ಟಿ. ಯಷ್ಟು ಜಾಸ್ತಿ ನೀರನ್ನು ಅವರಿಗೆ ಕೊಟ್ಟಿದ್ದಾರೆ. ಆಂಧ್ರಕ್ಕೆ ೮೦೦ ಟಿ.ಎಂ ಸಿ.ಎಫ್.ಟಿ. ಕೊಟ್ಟಿದ್ದಾರೆ. ನಮ್ಮ ಲೆಕ್ಕದ ಪ್ರಕಾರ ಜಲಾಶಯದ ಪ್ರದೇಶ ಎಷ್ಟು ಇದೆ, ಎಂದರೆ ನಮ್ಮಲ್ಲಿ ೪೭ ಪರ್ಸೆಂಟ್ ಇದೆ. ಅದರ